**ದಿನಾಂಕಃ 09.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –**

ನಾನು 6 ನೇ ತರಗತಿವರೆಗೆ ಓದಿದ್ದೇನೆ. ನನ್ನ ಗಂಡ ಸೈಕಲ್ ಶಾಪ್ ನಲ್ಲಿ ಕೆಲಸ ಮಾಡುತ್ತಾರೆ. ಇದೇ ಮೊದಲ ಬಾರಿಗೆ ಕಛೇರಿ ಕೆಲಸದ ಬಾಬ್ತು ನಾನು ಸದರಿ ಗ್ರಾಮ ಪಂಚಾಯ್ತಿಗೆ ಹೋಗಿದ್ದೆ. ಅದೇ ಜಾಗದಲ್ಲಿ ಸ್ವಲ್ಪ ಭಾಗವನ್ನು 1993 ರಲ್ಲಿ ಖರೀದಿಸಿದ್ದೆ ಎನ್ನುವುದು ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟ ಸ್ವತ್ತನ್ನು ನಾನು 2015 ರಲ್ಲಿ ಖರೀದಿಸಿರಬಹುದು. 11 ಬಿ ಗಾಗಿ ಅರ್ಜಿಯನ್ನು ಆ ಗ್ರಾಮ ಪಂಚಾಯ್ತಿಯ ಕಛೇರಿಯಲ್ಲಿ ಸಾಲಿನಲ್ಲಿ ಕುಳಿತಿದ್ದ ಒಬ್ಬ ವ್ಯಕ್ತಿಯ ಹತ್ತಿರ ಕೊಟ್ಟು ಹೋಗಿದ್ದೆ. ನಾನು 11 ಬಿ ದಾಖಲಾತಿಗಾಗಿ ಅರ್ಜಿಯನ್ನು ದಿಃ 21.08.2018 ರಂದು ಪಿಡಿಒ ರವರ ಬಳಿಯಲ್ಲಿ ನೀಡಿದ್ದೆ ಎನ್ನುವುದು ಸರಿಯಲ್ಲ. ದೋಷಾರೋಪಣೆ ಪಟ್ಟಿಯ ಪುಟ ಸಂಖ್ಯೆ 104 ರಲ್ಲಿ ಇರುವ ಅರ್ಜಿಯನ್ನು ತೋರಿಸಿ ಸಾಕ್ಷಿಗೆ ಕೇಳಲಾಗಿ , ಸಾಕ್ಷಿ ಸದರಿ ಅರ್ಜಿಯನ್ನು ಪರಿಶೀಲಿಸಿ , ಆ ದಿನಿದಂದು ಅಂದರೆ ದಿಃ 21.08.2018 ರಂದು ನಾನು ಯಾವುದೇ ಅರ್ಜಯನ್ನು ಕೊಟ್ಟಿರುವುದಿಲ್ಲ ಎನ್ನುತ್ತಾರೆ. ಆದರೆ ಸದರಿ ಪುಟದಲ್ಲಿ ಇರುವ ಅರ್ಜಿಯಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ. ಅದರಲ್ಲಿ ಇರುವ ವಿವರಗಳ ಬಗ್ಗೆ ತಿಳಿಸಿ ಕೇಳಲಾಗಿ, ಸಾಕ್ಷಿ , ಆ ವಿವರ ನನಗೆ ಹಾಗೂ ನನ್ನ ಸ್ವತ್ತಿಗೆ ಸಂಬಂದಪಟ್ಟ ವಿವರ ಆಗಿರುತ್ತದೆ ಎಂದು ಒಪ್ಪಿರುತ್ತಾರೆ. ಸದರಿ ದಾಖಲಾತಿಯನ್ನು ನಿಡಿ 1 ಎಂದು ಗುರುತುಪಡಿಸಿಕೊಳ್ಳಲಾಯಿತು. ಆ ಅರ್ಜಯನ್ನು ನೀಡುವಾಗ ನಾನು ಸ್ವತ್ತಿನ ಕ್ರಯ ಪತ್ರದ ನಕಲು ಮತ್ತು ಇತರೇ ದಾಖಲಾತಿಗಳನ್ನು ಅಳವಡಿಸಿ ಕೊಟ್ಟಿದ್ದೆ ಎನ್ನುವುದು ಸರಿ. ಸದರಿ

ಅರ್ಜಿಯನ್ನು ನೀಡುವಾಗ ಶುಲ್ಕವನ್ನೇನಾದರು ಪಾವತಿಸಿದ್ದೆನೋ ಇಲ್ಲವೋ ಎನ್ನುವುದು ನನಗೀಗ ನೆನಪಿಲ್ಲ. ಈ ಸ್ವತ್ತಿಗೆ ಸಂಬಂಧಪಟ್ಟಂತೆ ಮನೆ ಕಂದಾಯವನ್ನು ಮತ್ತು ಖಾಲಿ ಜಾಗದ ಕಂದಾಯವನ್ನು ಕಟ್ಟಿರುವುದಿಲ್ಲ. ಮನೆ ಕಂದಾಯ ಎಷ್ಟಾಗುತ್ತದೆ , ಖಾಲಿ ಜಾಗದ ಕಂದಾಯ ಎಷ್ಟಾಗುತ್ತದೆ ಎಂದು ಆ ಗ್ರಾಮ ಪಂಚಾಯ್ತಿಗೆ ಹೋಗಿ ಕೇಳಿದ್ದೆ. ಆದರೆ ಅಲ್ಲಿದ್ದವರು ಯಾರೂ ಸರಿಯಾಗಿ ಉತ್ತರ ಕೊಟ್ಟಿರಲಿಲ್ಲ. ನಾನು ಅರ್ಜಯನ್ನು ಸಲ್ಲಿಸಿದ ನಂತರ 6 ತಿಂಗಳುಗಳ ಕಾಲ ಮಧ್ಯ ಮಧ್ಯದಲ್ಲಿ ಹೋಗಿ ಅಲ್ಲಿ ಕೇಳುತ್ತಲೇ ಇದ್ದೆ. ಆದರೆ ಯಾರೂ ಸರಿಯಾದ ಮಾಹಿತಿಯನ್ನು ನೀಡುತ್ತಿರಲಿಲ್ಲ. ನಂತರ ನನಗೆ ಸಿಟ್ಟು ಬಂದು ಮಹಡಿ ಮೇಲೆ ಹೋಗಿ ಅಲ್ಲಿದ್ದ ನೀಲಪ್ಪ ಎನ್ನುವ ಅಧಿಕಾರಿಯನ್ನು ಹೋಗಿ ಕೇಳಿದಾಗ ಅವರು ಕೆಳಗಡೆ ಮರಪ್ಪ ಎನ್ನುವವರು ಇದ್ದಾರೆ, ನಿಮ್ಮ ಫೈಲನ್ನು ಅವರ ಬಳಿಯಲ್ಲಿ ಕೊಟ್ಟಿದ್ದೇನೆ, ಹೋಗಿ ವಿಚಾರಿಸಿ ಎಂದು ಹೇಳಿದರು. ಆದರೆ ಕಛೇರಿಯಲ್ಲಿ ಮರಪ್ಪ ಇರಲಿಲ್ಲ. ನಾನು ಅವರಿಗೆ ಪೋನ್ ಮಾಡಿದೆ, ಅವರು, ಬೆಲವತ್ತದಲ್ಲೇ ಇದ್ದೇನೆ ಎಂದರು. ಅವರ ಪೋನ್ ನಂಬರ್ ನ್ನು ನನಗೀಗ ಹೇಳಲು ಆಗುವುದಿಲ್ಲ. ಅವರ ಪೋನ್ ನಂಬರ್ ನ್ನು ಒಂದು ಚೀಟಿಯಲ್ಲಿ ಆ ಮಹಡಿ ಮೇಲೆ ಇದ್ದ ಅಧಿಕಾರಿ ಬರೆದುಕೊಟ್ಟಿದ್ದರು. ನಾನು ಆರೋಪಿಯ ವಿರುದ್ಧ ಈ ದೂರನ್ನು ನೀಡಿದ ನಂತರ, ಪೋನ್ ನಂಬರ್ ಇದ್ದಂತಹ ಆ ಚೀಟಿಯನ್ನು ಪೋಲೀಸರಿಗೆ ಕೊಟ್ಟಿರುವುದಿಲ್ಲ. ನಾನು ಮರಪ್ಪನವರಿಗೆ ಫೋನ್ ಮಾಡಿಯೇ ಇರುವುದಿಲ್ಲ ಎನ್ನುವುದು ಸರಿಯಲ್ಲ.

2. ಸಾಕ್ಷಿಗೆ ದೋಷಾರೋಪಣೆ ಪಟ್ಟಿಯ ಪುಟ ಸಂಖ್ಯೆ 185 ರ ದಾಖಲಾತಿಯ ಮೇಲಿರುವ ಸಹಿ ನಿಮ್ಮದಾಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 'ಸದರಿ ಸಹಿ ನನ್ನದಲ್ಲ'

ಎನ್ನುತ್ತಾರೆ. ಸದರಿ ದಾಖಲಾತಿಯನ್ನು ಗುರುತಿಸುವಿಕೆಯ ಸಲುವಾಗಿ ನಿಡಿ 2 ಎಂದು ಗುರುತುಪಡಿಸಿಕೊಳ್ಳಲಾಯಿತು. ಸದರಿ ದಾಖಲಾತಿ ನೋಟೀಸು ಆಗಿದ್ದು , ಅದನ್ನು ಆರೋಪಿ ನಿಮಗೆ ಒಟ್ಟು ರೂ.12,432/- ಕಂದಾಯ ಬಾಕಿ ಇರುತ್ತದೆ ಎಂದು ದಿಃ 03.09.2018 ರಂದು ನೀಡಿದ ನೋಟೀಸು ಆಗಿರುತ್ತದೆ ಎಂದು ಮಾಡಿದ ಸಲಹೆಗೆ ಸಾಕ್ಷಿ, 'ಇಲ್ಲ' ಎನ್ನುತ್ತಾರೆ. ನಿಡಿ 2 ರ ಮೇಲೆ ಇರುವ ಸಹಿ ನನ್ನದಾಗಿದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪ್ರಶ್ನೆಃ ಆರೋಪಿ ಟ್ರಾಪ್ ಆಗುವ ಮೊದಲು ನೀವು 1 ರೂ. ಕಂದಾಯವನ್ನಾದರು ಕಟ್ಟಿರುತ್ತೀರಾ ?

ಉತ್ತರಃ ನಾನು ಆ ದಿನ ಆರೋಪಿಯ ಬಳಿಗೆ ಹೋಗಿ ಕಂದಾಯ ಎಷ್ಟು ಕಟ್ಟಬೇಕು ಎಂತಲೇ ಕೇಳಿದ್ದೆ ಎನ್ನುತ್ತಾರೆ.

3. ಮನೆ ಕಂದಾಯ ಒಟ್ಟು ರೂ.15,000/- ದವರೆಗೆ ಆಗಬಹುದು ಎಂದು ಆರೋಪಿ ಹೇಳಿದ್ದರು ಎನ್ನುವುದು ಸರಿ. ಅದೇ ದಿನ ನಾನು ಕಂದಾಯವನ್ನು ಕಟ್ಟಿರುತ್ತೇನೆ. ಸಾಕ್ಷಿ ಪುನಃ ನುಡಿಯುತ್ತಾರೆ, ನಾನು ಕಂದಾಯವನ್ನು ಅದೇ ತಿಂಗಳ 6 ನೇ ತಾರೀಖು ಕಟ್ಟಿರುತ್ತೇನೆ ಎಂದು. ನಾನು ರೂ.12,000/- ಕಂದಾಯ ಕಟ್ಟಿರುತ್ತೇನೆ. ಅದನ್ನು ಆರೋಪಿಯ ಬಳಿಯಲ್ಲೇ ಕಟ್ಟಿರುತ್ತೇನೆ. ಕಂದಾಯ ಕಟ್ಟಿದ ಬಗ್ಗೆ ನಾನು ರಶೀದಿಯನ್ನು ಪಡೆದುಕೊಂಡಿರುತ್ತೇನೆ. ಆರೋಪಿ ರಶೀದಿ ಕೊಡುವ ಮೊದಲೇ ನಾನು ಲೋಕಾಯುಕ್ತ ಪೋಲೀಸರನ್ನು ಕರೆದುಕೊಂಡು ಬಂದು ಅವರನ್ನು ಹಿಡಿಸಿರುತ್ತೇನೆ ಎನ್ನುವುದು ಸರಿಯಲ್ಲ.

4. ನಾನು ಅರ್ಜಿ ಕೊಟ್ಟ ನಂತರ ಪಿಡಿಒ ಬೋರೇಗೌಡರು ನನ್ನ ಹೇಳಿಕೆಯನ್ನೇನು ಪಡೆದಿರುವುದಿಲ್ಲ.

5. ಈಗ ತೋರಿಸುತ್ತಿರುವ ಪುಟ ಸಂಖ್ಯೆ 115 ರಲ್ಲಿ ಇರುವ ದಾಖಲಾತಿಯ ಮೇಲೆ ಇರುವ ಸಹಿ ನನ್ನದಲ್ಲ. ಸದರಿ ಸಹಿಯನ್ನು ಪಿಡಿಒ ಬೋರೇಗೌಡರು ಪಡೆದಿರುತ್ತಾರೆ ಎನ್ನುವುದು ಸರಿಯಲ್ಲ.

6. ನಾನು ಅರ್ಜಿಯನ್ನು ಕೊಟ್ಟಾಗ ಆ ಅರ್ಜಿಗೆ ದಿನಾಂಕವನ್ನು ನಮೂದಿಸಿ ಕೊಟ್ಟಿದ್ದೆ. ನಿಡಿ 1 ರ ಮೇಲಿರುವ ಸಹಿಯನ್ನು ನಾನು ಯಾವಾಗ ಮಾಡಿರುತ್ತೇನೆ ಎಂದು ನನಗೀಗ ನೆನಪಿಲ್ಲ. ನಾನು ಸದರಿ ಸಹಿಯನ್ನು ಪಿಡಿಒ ಕಛೇರಿಯಲ್ಲೂ ಹಾಕಿರುವುದಿಲ್ಲ, ಮನೆಯಲ್ಲೂ ಹಾಕಿರುವುದಿಲ್ಲ.

7. ಆರೋಪಿ ಬಾಕಿ ಕಂದಾಯ ಇದೆ ಎಂದು ನೋಟೀಸು ಕೊಟ್ಟಿದ್ದರಿಂದ, ಆತ ಲಂಚ ಕೇಳಿರುತ್ತಾನೆ ಎಂದು ದೂರನ್ನು ಕೊಟ್ಟು ಸಿಕ್ಕಿಸಿರುತ್ತೇನೆ ಎನ್ನುವುದು ಸರಿಯಲ್ಲ.

8. ಆ ರೂ.12,000/- ಗಳನ್ನು ಎಸಿಬಿ ಯವರು ಚೆಕ್ ಮೂಲಕ ನನಗೆ ವಾಪಾಸ್ಸು ಮಾಡಿದ್ದಾರೆ ಎನ್ನುವುದು ಸರಿ. ನಂತರದಲ್ಲಿಯೂ ನಾನು ಕಂದಾಯ ಕಟ್ಟಿರುವುದಿಲ್ಲ. 11 ಬಿ ದಾಖಲಾತಿಯನ್ನು ನೀಡಿರುತ್ತಾರೆ. ಪುಟ ಸಂಖ್ಯೆ 178 ರಲ್ಲಿರುವ ನಮೂನೆ 11 ಬಿ ಯನ್ನು ನಾನೇ ಗ್ರಾಮ ಪಂಚಾಯ್ತಿ ಕಛೇರಿಗೆ ಹೋಗಿ ಪಡೆದುಕೊಂಡು ಬಂದಿರುತ್ತೇನೆ. ದಿಃ 04.10.2018 ರಂದು ನನ್ನಿಂದ ರೂ.5,000/- ಕಂದಾಯದ ಹಣವನ್ನು ಪಾವತಿಸಿಕೊಂಡು ಅದೇ ದಿನ ನಮೂನೆ 11 ಬಿ ಯನ್ನು ನೀಡಿರುತ್ತಾರೆ ಎನ್ನುವುದು ಸರಿ. ಇನ್ನು ರೂ.7,000/- ಕಂದಾಯ ಬಾಕಿ ಉಳಿದಿತ್ತು ಎನ್ನುವುದು

ಸರಿಯಲ್ಲ. ಮೊದಲು ಖರೀದಿಸಿದ ಸ್ವತ್ತು ಮತ್ತು ನಂತರದಲ್ಲಿ ಖರೀದಿಸಿದ ಸ್ವತ್ತು ಒಟ್ಟಿಗೆ ಇರುವುದರಿಂದ , ಈ ಎರಡೂ ಸ್ವತ್ತುಗಳಿಗೆ ಸೇರಿಸಿ ಒಟ್ಟಾಗಿ ನಮೂನೆ 11ಬಿ ಗಾಗಿ ಅರ್ಜಿಯನ್ನು ಸಲ್ಲಿಸಿದ್ದೆ. ನಮೂನೆ 11ಬಿಯನ್ನು ಕೊಡುವ ಅಧಿಕಾರ ಹೊಂದಿರುವವರು ಪಿಡಿಒ ಎನ್ನುವುದು ಸರಿ.

9. ಈ ಪ್ರಕರಣ ದಾಖಲಾದ ನಂತರ, ಮೈಸೂರಿನ ಜಿಲ್ಲಾ ಪಂಚಾಯ್ತಿ ಕಛೇರಿಯಲ್ಲಿ ನಡೆದ ವಿಚಾರಣೆಯಲ್ಲಿ ಹೋಗಿ ಸಾಕ್ಷ್ಯ ನೀಡಿರುತ್ತೇನೆ ಎನ್ನುವುದು ಸರಿ. ಈಗ ತೋರಿಸುತ್ತಿರುವ ದಾಖಲಾತಿ ನಾನು ಆ ವಿಚಾರಣೆಯಲ್ಲಿ 2ನೇ ದಿನ ನೀಡಿದ ಹೇಳಿಕೆ ಆಗಿರುತ್ತದೆ ಎನ್ನುವುದು ಸರಿ. ಸದರಿ ಹೇಳಿಕೆಯನ್ನು ನಿಡಿ 3 ಎಂದು ಗುರುತುಪಡಿಸಿಕೊಳ್ಳಲಾಯಿತು.

10. ನಾನು ದೂರಿನಲ್ಲಿ ತಿಳಿಸಿರುವಂತೆ 6 ತಿಂಗಳ ಹಿಂದೆಯೇ ಅರ್ಜಿಯನ್ನು ಸಲ್ಲಿಸಿ, 3 ತಿಂಗಳ ಹಿಂದೆ ಹೋಗಿ ವಿಚಾರಿಸಿದ್ದೆ ಎಂದು ಸುಳ್ಳು ನಮೂದಿಸಿಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತೆ ಅಂದರೆ , "ಆದ್ದರಿಂದ ನಾನು ದಿಃ 04.09.2018 ರಂದು ಗ್ರಾಮ ಪಂಚಾಯ್ತಿ ಕಛೇರಿಗೆ ಹೋದೆ . ಅಲ್ಲಿ ಮೇಲುಗಡೆ ಇದ್ದಂತಹವರು , ಕೆಳಗಡೆ ಇರುವ ಮಾರಪ್ಪ ನವರ ಬಳಿಯಲ್ಲಿ ನಿಮ್ಮ ಅರ್ಜಿಯನ್ನು ಕಳುಹಿಸಿಕೊಟ್ಟಿರುತ್ತೇನೆ , ಅವರಲ್ಲಿ ಹೋಗಿ ವಿಚಾರಿಸಿ ಎಂದು ಹೇಳಿ ಮಾರಪ್ಪ ನವರ ಫೋನ್ ನಂಬರ್ ಸಹ ಕೊಟ್ಟರು , ನಂತರ ನಾನು ಕೆಳಗಡೆ ಹೋಗಿ ನೋಡಲಾಗಿ ಅಲ್ಲಿ ಮಾರಪ್ಪ ಇರಲಿಲ್ಲ " ಎನ್ನುವ ವಿಷಯವನ್ನು ನನ್ನ ದೂರಿನಲ್ಲಿಯೂ ಮತ್ತು ನೀಡಿದಂತಹ ಹೇಳಿಕೆಯಲ್ಲಿಯೂ ತಿಳಿಸಿರುತ್ತೇನೆ. ಈ ವಿಷಯವನ್ನು ದೂರಿನಲ್ಲಿ ಮತ್ತು ನನ್ನ ಹೇಳಿಕೆಯಲ್ಲಿ

ತಿಳಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಆತನಿಗೆ ಫೋನ್ ಮಾಡಿದಾಗ ಆತ ಬೆಲವತ್ತದಲ್ಲಿಯೇ ಇದ್ದೇನೆ ಎಂದು ಹೇಳಿದರು ಎಂದೂ ಸಹ ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ನಾನು ಮತ್ತು ಮಾರಪ್ಪ ಫೋನಿನಲ್ಲಿ ಮಾತನಾಡಿದ್ದನ್ನು ನಾನು ರೆಕಾರ್ಡ ಮಾಡಿಕೊಂಡಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಅದನ್ನು ನಂತರದಲ್ಲಿ ಸೃಷ್ಟಿಸಲಾಗಿರುತ್ತದೆ ಎನ್ನುವುದು ಸರಿಯಲ್ಲ. ಆರೋಪಿ ಸುಮಾರು 15,000/- ದಿಂದ 20,000/- ರೂ ಖರ್ಚಾಗುತ್ತದೆ ಎಂದು ಹೇಳಿದ್ದರು ಎಂದು, ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಈ ವಿಷಯವನ್ನು ದೂರನಲ್ಲಿಯೂ ಮತ್ತು ನನ್ನ ಹೇಳಿಕೆಯಲ್ಲಿಯೂ ತಿಳಿಸಿರುತ್ತೇನೆ. ಆರೋಪಿ ರೂ.12,000/- ಕೊಡಬೇಕು ಎಂದು ಕೇಳಿದ್ದು ನಾನು ಮಾಡಿಕೊಂಡಂತಹ ರೆಕಾರ್ಡಿಂಗ್ ನಲ್ಲಿ ಇರುತ್ತದೆ. ಆರೋಪಿ ರೂ.12,000/- ಕ್ಕಾಗಿ ಬೇಡಿಕೆ ನನ್ನಲ್ಲಿ ಇಟ್ಟಿರಲಿಲ್ಲ ಎನ್ನುವುದು ಸರಿಯಲ್ಲ. ಆ ರೀತಿಯಲ್ಲಿ ರೆಕಾರ್ಡ ಕೂಡ ಆಗಿರುವುದಿಲ್ಲ ಎನ್ನುವುದು ಸರಿಯಲ್ಲ.

11. ದೂರನ್ನು ನಾನು ಎಲ್ಲಿ ಟೈಪ್ ಮಾಡಿಸಿದೆ ಎನ್ನುವುದು ನೆನಪಿಲ್ಲ. ದೂರನ್ನು ಅಂದರೆ ನಿಪಿ 1 ನ್ನು ಎಸಿಬಿ ಕಛೇರಿಯಲ್ಲೇ ತಯಾರಿಸಲಾಗಿದೆ ಎನ್ನುವುದು ಸರಿಯಲ್ಲ. ನಾನು ಕೊಟ್ಟಂತಹ ದೂರನ್ನು ಅಲ್ಲಿ ಬಂದಂತಹ ಪಂಚರಿಗೆ ಓದಲು ಕೊಟ್ಟಿರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಯಾವುದೇ ನಡವಳಿಕೆಗಳನ್ನು ಆ ಕಛೇರಿಯಲ್ಲಿ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. ನಂತರದಲ್ಲಿ ಈ ಬಗ್ಗೆ ದಾಖಲಾತಿಗಳನ್ನು ಮಾಡಿಕೊಂಡಿರುತ್ತಾರೆ ಎನ್ನುವುದು ಸರಿಯಲ್ಲ. ನೋಟುಗಳು ಇದ್ದ ಕವರ್ ನ್ನು ನಾನು ಬಿಸಾಕಿದೆ. ಅಂದರೆ ನೋಟುಗಳನ್ನು ಆರೋಪಿಗೆ ಕೊಟ್ಟ ನಂತರ ಬಿಸಾಕಿದೆ.

ನಾನು ಹಾಜರುಪಡಿಸಿದ ಮೊಬೈಲ್ ಚಿಪ್ಪ ಯಾವ ಕಂಪನಿಯದ್ದು ಮತ್ತು ಎಷ್ಟು ಕೆಪ್ಯಾಸಿಟಿಯದ್ದು ಎನ್ನುವುದು ನನಗೆ ಗೊತ್ತಿಲ್ಲ. ಆರೋಪಿಗೆ ಹಣವನ್ನು ಕೊಟ್ಟ ನಂತರ ನಾನು ನನ್ನ ಸೀರೆಯ ಸೆರಗಿನಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ಸೂಚನೆಯನ್ನು ಕೊಟ್ಟಿರುವುದಿಲ್ಲ ಎನ್ನುವುದು ಸರಿಯಲ್ಲ. ಆ ಚಿಪ್ಪಿನಲ್ಲಿದ್ದ ಸಂಭಾಷಣೆಯನ್ನು 3 ಸಿಡಿಗಳಿಗೆ ವರ್ಗಾಯಿಸಿದವರು ಸಿಬ್ಬಂದಿ . ಅವರ ಹೆಸರು ನನಗೆ ಗೊತ್ತಿಲ್ಲ. ಆ ಸಿಡಿ ಗಳನ್ನು ಕವರ್ ನಲ್ಲಿ ಹಾಕಿ ಸೀಲು ಮಾಡಿ ಇಟ್ಟುಕೊಂಡರು. ಅಲ್ಲಿ ಪೋಟೋಗಳನ್ನು ಕ್ಯಾಮರಾದಿಂದ ತೆಗೆದರು. ಯಾರು ತೆಗೆದರು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಎಸಿಬಿ ಸಿಬ್ಬಂದಿಯವರೇ ಆ ಪೋಟೋಗಳನ್ನು ತೆಗೆದರು. ಅಲ್ಲಿ ಟ್ರೆಪಿಂಗ್ ನ್ನು ಮಧ್ಯಾಹ್ನ 12.30 ರಿಂದ , ಸಂಜೆ 04.30 ರವರೆಗೆ ಮಾಡಿದರು. ನಂತರ ನಾನು ನಮ್ಮ ಮನೆಗೆ ಹೋದೆ. 5 ನೇ ತಾರೀಖಿಗೆ ನಾವು ಆ ಕಛೇರಿಗೆ ಹೋಗುವಾಗ ಆರೋಪಿಗೆ ನಾನು ಪೋನ್ ಮಾಡಿದಾಗ ಆತ ಈ ದಿನ ನಾನು ಕಛೇರಿಯಲ್ಲಿ ಇರುವುದಿಲ್ಲ ಎಂದು ಹೇಳಿದ. ಇದನ್ನು ನಾನು ರೆಕಾರ್ಡ ಮಾಡಿಕೊಂಡಿರುತ್ತೇನೆ. ಆದರೆ ಆ ಸಮಯದಲ್ಲಿ ಆರೋಪಿ, ನನಗೆ ಹಣ ಕೊಡಬೇಕು ಎಂದು ಕೇಳಿರುವುದಿಲ್ಲ. 5 ನೇ ತಾರೀಖಿನಂದು ಎಸಿಬಿ ಯವರು ನನ್ನ ಕೈಯಲ್ಲಿ ಹಣ ಕೊಟ್ಟಿರಲಿಲ್ಲ. ಆರೋಪಿ ಮರು ದಿನ 11.00 ಗಂಟೆಗೆ ರಬೇಕು ಎಂದು ಹೇಳಿದ್ದನ್ನು ನಿಪಿ 10 ರಲ್ಲಿ ನಮೂದಿಸಿರುವುದಿಲ್ಲ. 5 ನೇ ತಾರೀಖಿನಂದು ಎಸಿಬಿ ಸಿಬ್ಬಂದಿ ಹಣವನ್ನು ಕವರ್ ಸಮೇತ ಅಲ್ಮೇರಾದಲ್ಲಿ ಇಟ್ಟರು.

**(ಮುಂದುವರಿದ ಪಾಟೀ ಸವಾಲಿಗಾಗಿ  ಮುಂದೂಡಲಾಯಿತು)**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.